# ಅನಿವಾಸಿ ಭಾರತೀಯರಿಂದ ಹೊಸ ಠೇವಣಿಗಳನ್ನು ಸ್ವೀಕರಿಸಲು ಭಾರತೀಯ ರಿಸರ್ವ್ ಬ್ಯಾಂಕು ಕೆಲವು ಸಂಸ್ಥೆಗಳಿಗೆ ಅನುಮತಿ ನಿರಾಕರಿಸುತ್ತದೆ

**ಏಪ್ರಿಲ್ ೨೪,೨೦೦೪**

ಅಧಿಕೃತ ವ್ಯಾಪಾರಿ (ಡೀಲರ್) ಗಳು ಅಥವಾ ಅಧಿಕೃತ ಬ್ಯಾಂಕುಗಳಲ್ಲದ ಇತರ ಸಂಸ್ಥೆಗಳಿಗೆ ರಿಸರ್ವ್ ಬ್ಯಾಂಕು, ಅನಿವಾಸಿ ಭಾರತೀಯರು ತಾವು ವಿದೇಶಗಳಿಂದ ಸ್ವೀಕರಿಸಿದ ಹೊಸ ಜಮೆಗಳಿಂದ ನೀಡುವ ಠೇವಣಿಗಳನ್ನು ಅಂಗೀಕರಿಸಲು ಅನುಮತಿ ಇಂದು ನಿರಾಕರಿಸಿದೆ. ಅನಿವಾಸಿ ಭಾರತೀಯರ ಅನಿವಾಸಿ ಬಾಹ್ಯ/ವಿದೇಶೀ ಕರೆನ್ಸಿಯ ಅನಿವಾಸಿ ಬ್ಯಾಂಕ್ ಖಾತೆಗಳಿಗೆ {ಎಫ್‌ಸಿಎನ್‌ಆರ್(ಬಿ)} ಖರ್ಚು ಹಾಕುವ ಮೂಲಕ ಅನಿವಾಸಿ ಭಾರತೀಯರಿಂದ ಬರುವ ಠೇವಣಿಗಳನ್ನು ಸ್ವೀಕರಿಸಲೂ ಆ ಸಂಸ್ಥೆಗಳಿಗೆ ಅನುಮತಿ ಇರುವುದಿಲ್ಲ. ಆದರೂ ಅನಿವಾಸಿ ಭಾರತೀಯರು ಸಂದರ್ಭಾನುಸಾರ ಹಣವನ್ನು ಸ್ವದೇಶಕ್ಕೆ ಕಳುಹಿಸುವ ಅಥವಾ ಸ್ವದೇಶಕ್ಕೆ ಕಳುಹಿಸದೇ ಇರುವುದರ ಆಧಾರದ ಮೇಲೆ ಅವರ ಹೆಸರಿನಲ್ಲಿ ಖಾತಾ ಪುಸ್ತಕಗಳಲ್ಲಿ ಈಗಿರುವ ಠೇವಣಿಗಳನ್ನು ಹೊಂದಿರಲು ಮತ್ತು ತಮ್ಮ ಖಾತಾ ಪುಸ್ತಕಗಳಲ್ಲಿ ಅಂಥ ಠೇವಣಿಗಳನ್ನು ಮುಂದುವರಿಸಲೂ ಆ ಸಂಸ್ಥೆಗಳಿಗೆ ಅನುಮತಿ ಇರುತ್ತದೆ. ಅಂಥ ಠೇವಣಿಗಳ ಮೇಲೆ ಬಂದ ಬಡ್ಡಿಯು ಸ್ವದೇಶಕ್ಕೆ ಕಳುಹಿಸಬಹುದಾದ ಹಣವಾಗಿ ಮುಂದುವರಿಯುತ್ತದೆ.

ಪರಿಷ್ಕೃತ ಸೂಚನೆಗಳು ತಕ್ಷಣದಿಂದ ಅನ್ವಯವಾಗುತ್ತವೆ. ಪ್ರಚಲಿತ ಬೆಳವಣಿಗೆಗಳ ಹಿನ್ನೆಲೆಯಲ್ಲಿ ವಿಷಯವನ್ನು ಪರಿಶೀಲಿಸಿದ ತರುವಾಯ ಅನಿವಾಸಿ ಭಾರತೀಯರಿಂದ ಠೇವಣಿ ಸ್ವೀಕರಿಸಲು ಅಧಿಕೃತ ವ್ಯಾಪಾರಿಗಳು (ಡೀಲರ್)/ಅಧಿಕೃತ ಬ್ಯಾಂಕುಗಳಲ್ಲದ ಇತರ ಸಂಸ್ಥೆಗಳಿಗೆ ಅನುಮತಿ ನಿರಾಕರಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

ಈಗಿರುವ ವಿನಿಯಮಗಳ ಮೇರೆಗೆ ಅಧಿಕೃತ ವ್ಯಾಪಾರಿಗಳು/ಅಧಿಕೃತ ಬ್ಯಾಂಕುಗಳಲ್ಲದೇ, ಕಂಪನಿಗಳ ಅಧಿನಿಯಮ 1956ರಡಿ ನೋಂದಾಯಿತವಾದ ಒಂದು ಕಂಪನಿ (ರಿಸರ್ವ್ ಬ್ಯಾಂಕಿನಲ್ಲಿ ನೋಂದಾಯಿತವಾದ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ ಸೇರಿದಂತೆ) ಅಥವಾ ಸಂಸತ್ತು ಅಥವಾ ರಾಜ್ಯ ವಿಧಾನಮಂಡಲದಿಂದ ಅಧಿನಿಯಮಿತವಾದ ಒಂದು ಕಾಯಿದೆಯಡಿ ಸೃಜಿಸಲಾದ ಒಂದು ಕಾರ್ಪೊರೇಟ್ ಸಂಸ್ಥೆಗೆ, ಹಣವನ್ನು ಸ್ವದೇಶಕ್ಕೆ ಕಳುಹಿಸುವುದರ ಆಧಾರದ ಮೇಲೆ ಅನಿವಾಸಿ ಭಾರತೀಯರಿಂದ ಠೇವಣಿಗಳನ್ನು ಸ್ವೀಕರಿಸಲು ಅನುಮತಿ ಇರುತ್ತದೆ. ಆದರೆ ಭಾರತದಲ್ಲಿನ ಒಂದು ಕಂಪನಿ ಅಥವಾ ಖಾಸಗಿ ಒಡೆತನದ ಒಂದು ಸಂಸ್ಥೆ ಅಥವಾ ಒಂದು ಫರ್ಮು ಹಣವನ್ನು ಹಿಂತಿರುಗಿ ಕಳುಹಿಸದೇ ಇರುವುದರ ಆಧಾರದ ಮೇಲೆ ಅನಿವಾಸಿ ಭಾರತೀಯರಿಂದ ಠೇವಣಿ ಸ್ವೀಕರಿಸಲು ಅನುಮತಿ ಇರುತ್ತದೆ. ಇಂಥ ಠೇವಣಿಗಳ ಮೇಲೆ ಗಳಿಕೆಯಾದ ಬಡ್ಡಿಯು ಚಾಲ್ತಿ ವರಮಾನವಾಗಿರುವುದರಿಂದ ಭಾರತದ ಹೊರಗೆ ಹಣವನ್ನು ಕಳುಹಿಸಲು ಅರ್ಹತೆ ಹೊಂದಿರುತ್ತದೆ.

ಪರಿಷ್ಕೃತ ಸೂಚನೆಗಳನ್ನು ಸಂಬಂಧಪಟ್ಟ ಘಟಕಗಳ ಗಮನಕ್ಕೆ ತರಲು ಅಧಿಕೃತ ವ್ಯಾಪಾರಿಗಳಿಗೆ ತಿಳಿಸಲಾಗಿದೆ.

ಪಿ.ವಿ.ಸದಾನಂದನ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2003–2004/1264